Spl. C 240/2019
PW: 01
CW: 01

## <u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕಬಳ್ಳಾಪುರ</u>

**SPECIAL CASE : 240/2019**

**ಫ್ರಾ.ಸಾ. 01**

**ದೋ.ಸಾ. 01**

| | | |
|---|---|---|
| ಸಾಕ್ಷಿಯ ಹೆಸರು | : | ಎಂ ಪ್ರಭುಶಂಕರ್ |
| ತಂದೆಯ ಹೆಸರು | : | ಮುನಿಯಪ್ಪ |
| ವಯಸ್ಸು | : | 55 ವರ್ಷ |
| ಉದ್ಯೋಗ | : | ಡಿವೈಎಸ್‌ಪಿ, ಸ್ಟೇಟ್ ಇಂಟಲಿಜೆನ್ಸ್ ಡಿಪಾರ್ಟ್ಮೆಂಟ್ ಬೆಂಗಳೂರು |
| ವಾಸ | : | ಬೆಂಗಳೂರು. |

**ದಿನಾಂಕ 11.08.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ</u>**

1). ದಿನಾಂಕ 16.07.2017 ರಿಂದ 30.10.2019 ವರೆಗೆ ಚಿಕ್ಕಬಳ್ಳಾಪುರ ಉಪವಿಭಾಗದ ಡಿವೈಎಸ್‌ಪಿ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2). ದಿನಾಂಕ 12.08.2019 ರಂದು ಬಕ್ರೀದ್ ಹಬ್ಬದ ಪ್ರಯುಕ್ತ ಬಂದೋಬಸ್ತ್ ಗಾಗಿ ಚಿಕ್ಕಬಳ್ಳಾಪುರ ಗ್ರಾಮಾಂತರ ಠಾಣಾ ಸರಹದ್ದಿನಲ್ಲಿದ್ದು, ಚಿಕ್ಕಬಳ್ಳಾಪುರ ತಾಲ್ಲೂಕು ಹೊನ್ನೇನಹಳ್ಳಿ ಗ್ರಾಮದಿಂದ ಸುಮಾರು ಅರ್ಧ ಕಿಲೋಮೀಟರ್ ದೂರದಲ್ಲಿ ಬಾಗೇಪಲ್ಲಿ – ಚಿಕ್ಕಬಳ್ಳಾಪುರಕ್ಕೆ ಎನ್.ಹೆಚ್–7 ರಸ್ತೆ ಹಾದುಹೋಗಿದ್ದು, ಅಲ್ಲಿ ಐಎಂವಿ ಕಾಯ್ದೆಯಡಿ ವಾಹನಗಳನ್ನು ತಪಾಸಣೆ ಮಾಡಿ, ಐಎಂವಿ ಕಾಯ್ದೆ ಉಲ್ಲಂಘನೆಯ ಪ್ರಕರಣಗಳನ್ನು ದಾಖಲಿಸಲು, ನಾನು, ನನ್ನ ಕಛೇರಿ ಸಿಬ್ಬಂದಿಯಾದ ಹೆಚ್.ಸಿ–68 ನಾರಾಯಣಸ್ವಾಮಿ, ಹೆಚ್.ಸಿ–207 ಬಾಲಸುಬ್ರಮಣ್ಯ, ಹೆಚ್.ಸಿ–157 ಶಿವಪ್ಪ ಬ್ಯಾಕೋಡ್, ಹೆಚ್.ಸಿ–17 ಶ್ರೀನಾಥ್ ಹಾಗೂ ಪಿಸಿ–403 ಬಾಬು ಹಾಗೂ ಇಲಾಖಾ

ವಾಹನದ ಚಾಲಕ ಮೋಹನ್ ರವರುಗಳು ನಮಗೆ ಹಂಚಿಕೆಯಾಗಿದ್ದ ಸರ್ಕಾರಿ ಜೀಪ್ ಸಂಖ್ಯೆಃಕೆಎ–40–ಜಿ–1555 ರಲ್ಲಿ ವಾಹನಗಳ ತಪಾಸಣೆಗಾಗಿ ಬಾಗೇಪಲ್ಲಿ ಕಡೆಯಿಂದ ಬರುವ ವಾಹನಗಳನ್ನು ಸಿಬ್ಬಂದಿ ಸಹಾಯದಿಂದ ನಿಲ್ಲಿಸಿ ತಪಾಸಣೆ ಮಾಡುತ್ತಿದ್ದು, ಮಧ್ಯಾಹ್ನ ಸುಮಾರು 2.30 ಗಂಟೆ ಸಮಯದಲ್ಲಿ ಬಾಗೇಪಲ್ಲಿ ಕಡೆಯಿಂದ ಒಂದು ಆಟೋ ಹಾಗೂ ಅದರ ಹಿಂದೆ ಒಂದು ಟಿವಿಎಸ್ ದ್ವಿಚಕ್ರ ವಾಹನವನ್ನು ಚಲಾಯಿಸಿಕೊಂಡು ಬಂದಿದ್ದು, ಅವುಗಳನ್ನು ನಿಲ್ಲಿಸಿ, ನಮ್ಮ ಕಛೇರಿ ಸಿಬ್ಬಂದಿಯಾದ ಹೆಚ್.ಸಿ–157 ಶಿವಪ್ಪರವರು ಆಟೋವನ್ನು ನಿಲ್ಲಿಸಿ, ಸದರಿ ವಾಹನದ ಚಾಲಕನಿಗೆ ವಾಹನದ ದಾಖಲೆಗಳು ಹಾಗೂ ಚಾಲನಾ ಪರವಾನಗಿಯನ್ನು ಕೇಳಲಾಗಿ, ಆತನು ಯಾವುದೇ ದಾಖಲೆಗಳನ್ನು ನೀಡದೇ, ವಾಹನದಿಂದ ಇಳಿದು ತಪ್ಪಿಸಿಕೊಂಡು ಓಡಲು ಪ್ರಯತ್ನಿಸಿದ್ದು, ಆಗ ನಮಗೆ ಹೆಚ್.ಸಿ–157 ಶಿವಪ್ಪರವರು ಹೇಳಲಾಗಿ, ನಮಗೆ ಸದರಿ ವಾಹನದ ಚಾಲಕನ ಮೇಲೆ ಅನುಮಾನ ಬಂದು ಆತನನ್ನು ನಮ್ಮ ಸಿಬ್ಬಂದಿಗಳ ಸಹಾಯದಿಂದ ಹಿಡಿದುಕೊಂಡಿರುತ್ತೇವೆ. ನಂತರ ಆಟೋವಿನ ಹಿಂಬದಿಯಲ್ಲಿ ಬಂದಿದ್ದ ಟಿವಿಎಸ್ ದ್ವಿಚಕ್ರ ವಾಹನದ ದಾಖಲೆಗಳು ಹಾಗೂ ಚಾಲನಾ ಪರವಾನಗಿಯನ್ನು ನಮ್ಮ ಸಿಬ್ಬಂದಿಯಾದ ಹೆಚ್.ಸಿ–68 ನಾರಾಯಣಸ್ವಾಮಿರವರು ಕೇಳಲಾಗಿ, ಆತನು ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ನಂತರ ಸದರಿ ದ್ವಿಚಕ್ರ ವಾಹನದ ಚಾಲಕನನ್ನು ನನ್ನ ಸಿಬ್ಬಂದಿ ನಾರಾಯಣಸ್ವಾಮಿರವರು ಹಿಡಿದುಕೊಂಡಿರುತ್ತಾರೆ. ಸದರಿ ಆಟೋವಿನಲ್ಲಿ ಹಿಂಬದಿಯಲ್ಲಿ ಇಬ್ಬರು ಆಸಾಮಿಗಳು ಕುಳಿತಿದ್ದು, ಸದರಿಯವರನ್ನು ನಮ್ಮ ಇತರೇ ಸಿಬ್ಬಂದಿಗಳ ಸಹಾಯದಿಂದ ವಿಚಾರಣೆ ಮಾಡಲಾಗಿ, ಸದರಿ ಆಟೋವಿನ ಹಿಂಬದಿಯಲ್ಲಿ ಸೀಟಿನ ಹಿಂದೆ ಎರಡು ಮೂಟೆಗಳು ಪತ್ತೆಯಾಗಿದ್ದು ಹಾಗೂ ಹಿಂಬದಿಯಲ್ಲಿ ಕುಳಿತಿದ್ದ ಸವಾರರ ಸೀಟಿನ ಮುಂದೆ ಕಾಲುಗಳ ಬಳಿ ಒಂದು ಮೂಟೆ ಒಟ್ಟು ಮೂರು ಮೂಟೆಗಳು ಪತ್ತೆಯಾಗಿರುತ್ತವೆ. ಸದರಿ ಮೂಟೆಗಳ ಬಗ್ಗೆ ಸದರಿ ಆಟೋವಿನಲ್ಲಿದ್ದ ಸವಾರರಿಗೆ ವಿಚಾರಣೆ ಮಾಡಲಾಗಿ,

ಅದು ಮಾದಕ ವಸ್ತುವಾದ ಗಾಂಜಾ ಎಂದು ತಿಳಿಸಿರುತ್ತಾರೆ. ಸದರಿ ಗಾಂಜಾವನ್ನು ಅನಂತಪುರದಿಂದ ಬೆಂಗಳೂರಿಗೆ ಸಾಗಿಸುತ್ತಿರುವುದಾಗಿ ತಿಳಿಸಿರುತ್ತಾರೆ. ಅವುಗಳ ಬಗ್ಗೆ ಹೆಚ್ಚಿನ ಮಾಹಿತಿ ಹಿಂಬದಿಯಲ್ಲಿ ಟಿವಿಎಸ್ ದ್ವಿಚಕ್ರ ವಾಹನದ ಚಾಲನೆ ಮಾಡಿಕೊಂಡು ಬರುತ್ತಿದ್ದ ಆಸಾಮಿಗೆ ಗೊತ್ತಿರುತ್ತದೆ ಎಂದು ನುಡಿಯುತ್ತಾರೆ.

3). ಸದರಿ ಆಸಾಮಿಗಳಿಂದ ಮಾದಕ ವಸ್ತು ಗಾಂಜಾ ಸಿಕ್ಕಿದ್ದರಿಂದ, ಮೌಖಿಕವಾಗಿ ನನ್ನ ಮೇಲಾಧಿಕಾರಿಗಳಾದ ಎಸ್.ಪಿ ಸಾಹೇಬರಿಗೆ ಫೋನ್ ಮುಖಾಂತರ ಮಾಹಿತಿ ನೀಡಿದ್ದು, ನಂತರ ನಾನು ಹಾಗೂ ನನ್ನ ಸಿಬ್ಬಂದಿಗಳು ನಮ್ಮನ್ನು ನಾವೇ ಪರಸ್ಪರ ಅಂಗಶೋಧನೆ ಮಾಡಿಕೊಂಡು, ಸ್ಥಳಕ್ಕೆ ಇಬ್ಬರು ಪಂಚರಾದ ನಾರಾಯಣಸ್ವಾಮಿ ಹಾಗೂ ಪ್ರಕಾಶರವರನ್ನು ಬರಮಾಡಿಕೊಂಡಿರುತ್ತೇನೆ. ಸದರಿ ಆಟೋವಿನಲ್ಲಿ ಸಿಕ್ಕಿದ್ದ ಮಾದಕ ವಸ್ತುವನ್ನು ತೂಕ ಮಾಡಲು ಬಾಳೇಹಣ್ಣು ವ್ಯಾಪಾರ ಮಾಡುವ ಟಿಪ್ಪು ಅಲಿಯಾಸ್ ಮಹಮ್ಮದ್ ಹುಸೇನ್ ರವರನ್ನು ತೂಕದ ಯಂತ್ರದೊಂದಿಗೆ ಸ್ಥಳಕ್ಕೆ ಬರಮಾಡಿಕೊಂಡಿರುತ್ತೇನೆ. ಸದರಿ ಘಟನೆಯ ಪೂರ್ಣ ವಿಡಿಯೋ ಚಿತ್ರೀಕರಣ ಮಾಡಲು ಅಪರ್ಣ ಸ್ಟುಡಿಯೋ ಮಾಲೀಕರಾದ ವೆಂಕಟರಮಣರವರನ್ನು ಸ್ಥಳಕ್ಕೆ ಕರೆಯಿಸಿಕೊಂಡಿರುತ್ತೇನೆ. ನಂತರ ಮೇಲ್ಕಂಡ ನಾಲ್ಕು ಜನರು ಸ್ಥಳಕ್ಕೆ ಹಾಜರಾಗಿದ್ದು, ಅವರ ಸಮಕ್ಷಮ ಆಟೋವಿನಲ್ಲಿದ್ದ ಸದರಿ ಮೂರು ಮೂಟೆಗಳನ್ನು ತೆರೆದು ಪರಿಶೀಲನೆ ಮಾಡಲಾಗಿ, ಅವುಗಳಲ್ಲಿ ಒಂದು ಮೂಟೆಯು ನೇರಳೆ ಬಣ್ಣದ್ದಾಗಿದ್ದು, ಮತ್ತೊಂದು ಮೂಟೆ ಕಪ್ಪು ಬಣ್ಣದ್ದು ಹಾಗೂ ಇನ್ನೊಂದು ಮೂಟೆ ಬಿಳಿ ಬಣ್ಣದ್ದಾಗಿರುತ್ತದೆ. ಸದರಿ ಮೂಟೆಗಳ ಪೈಕಿ ನೇರಳೆ ಬಣ್ಣದ ಮೂಟೆಯನ್ನು ತೆರೆದು ಪಂಚರ ಸಮಕ್ಷಮ ಪರಿಶೀಲಿಸಲಾಗಿ, ಅದರಲ್ಲಿ ನಾಲ್ಕು ಚಿಕ್ಕ ಚಿಕ್ಕ ಸೆಲೊ ಟೇಪ್ ಸುತ್ತಿರುವ ಪ್ಯಾಕೇಟುಗಳಿದ್ದು, ಸದರಿ ಪ್ಯಾಕೇಟ್ ಗಳನ್ನು ಪ್ರತ್ಯೇಕವಾಗಿ ತೂಕದ ಯಂತ್ರದಿಂದ ತೂಕ ಮಾಡಲಾಗಿ, 1 ನೇ ಪ್ಯಾಕೇಟ್ 2 ಕೆಜಿ 75 ಗ್ರಾಮ್ ತೂಕವಿದ್ದು, 2 ನೇ ಪ್ಯಾಕೇಟ್ 1 ಕೆಜಿ 900 ಗ್ರಾಮ್ ತೂಕವಿದ್ದು, 3 ನೇ

ಪ್ಯಾಕೇಟ್ 1 ಕೆಜಿ 850 ಗ್ರಾಮ್ ತೂಕವಿದ್ದು ಹಾಗೂ 4 ನೇ ಪ್ಯಾಕೇಟ್ 2 ಕೆಜಿ 50 ಗ್ರಾಮ್ ತೂಕವಿರುತ್ತದೆ. ಸದರಿ ಪ್ಯಾಕೇಟುಗಳಿಗೆ ಕ್ರಮ ಸಂಖ್ಯೆ:1 ರಿಂದ 4 ಎಂದು ನೀಡಲಾಗಿರುತ್ತದೆ. ಸದರಿ 4 ಪ್ಯಾಕೇಟುಗಳಿಂದ ತಲಾ 50 ಗ್ರಾಮ್ ಗಾಂಜಾವನ್ನು ಪ್ರತ್ಯೇಕವಾಗಿ ಎಫ್.ಎಸ್.ಎಲ್ ಪರೀಕ್ಷೆಗಾಗಿ ಪಂಚರ ಸಮಕ್ಷಮ ತೆಗೆದು, ಮಾದರಿಗಾಗಿ ಸಂಗ್ರಹಿಸಲಾಯಿತು. ಸದರಿ 4 ಪ್ಯಾಕೇಟುಗಳಿಂದ ತೆಗೆದ ಮಾದರಿ ಗಾಂಜಾಕ್ಕೆ ಹಾಗೂ ಉಳಿದ ಗಾಂಜಾದ ಮೇಲೆ ಪಂಚರು ಸಹಿ ಮಾಡಿದ ಚೀಟಿಗಳನ್ನು ಅಂಟಿಸಿ, "M" ಎಂಬ ಅಕ್ಷರದಿಂದ ಅರಗು ಸೀಲನ್ನು ಮಾಡಿ, ಸದರಿ ಬ್ಯಾಗ್ ಗಳಿಗೆ ನಾನೂ ಕೂಡ ಸಹಿ ಮಾಡಿರುತ್ತೇನೆ. ಮಾದರಿಗೆ ವಶಪಡಿಸಿಕೊಂಡ ಗಾಂಜಾಗಳಿಗೆ ಕ್ರಮ ಸಂಖ್ಯೆ:1(ಎ) ರಿಂದ 4(ಎ) ಎಂದು ಸಂಖ್ಯೆಯನ್ನು ನೀಡಿ ನಂತರ ಮತ್ತೇ ನೇರಳೆ ಬಣ್ಣದ ಬ್ಯಾಗಿನಲ್ಲಿ ಹಾಕಿ ಸೀಲು ಮಾಡಿರುತ್ತೇನೆ.

4). ನಂತರ ಬಿಳಿ ಬಣ್ಣದ ಲೆದರ್ ಬ್ಯಾಗನ್ನು ತೆಗೆದು ಪಂಚರ ಸಮಕ್ಷಮ ಪರಿಶೀಲಿಸಲಾಗಿ, ಅದರಲ್ಲಿ 3 ಸಂಖ್ಯೆ ಪ್ಯಾಕೇಟುಗಳಿದ್ದು, ಸದರಿ ಪ್ಯಾಕೇಟುಗಳನ್ನು ಸೆಲೊ ಟೇಪ್ ನಿಂದ ಸುತ್ತಿರುತ್ತವೆ, ಸದರಿ ಪ್ಯಾಕೆಟುಗಳನ್ನು ತೆರೆದು ನೋಡಲಾಗಿ ಅದರಲ್ಲಿ ಗಾಂಜಾ ಸೊಪ್ಪು ತುಂಬಿರುವುದು ಕಂಡುಬಂದಿದ್ದು, ಅವುಗಳನ್ನು ತೂಕದ ಯಂತ್ರದಿಂದ ತೂಕ ಮಾಡಲಾಗಿ 1 ನೇ ಪ್ಯಾಕೇಟ್ 1 ಕೆಜಿ 950 ಗ್ರಾಮ್ ತೂಕ ಇರುತ್ತದೆ. 2 ನೇ ಪ್ಯಾಕೇಟನ್ನು ತೆರೆದು ನೋಡಲಾಗಿ, ಅದರಲ್ಲಿ ಕೂಡ ಗಾಂಜಾ ಸೊಪ್ಪನ್ನು ತುಂಬಿದ್ದು ಕಂಡುಬಂದಿದ್ದು, ಅದನ್ನು ತೂಕದ ಯಂತ್ರದಿಂದ ತೂಕ ಮಾಡಲಾಗಿ ಸುಮಾರು 1 ಕೆಜಿ 900 ಗ್ರಾಮ್ ತೂಕ ಇರುತ್ತದೆ. ನಂತರ 3 ನೇ ಪ್ಯಾಕೇಟನ್ನು ತೆರೆದು ನೋಡಲಾಗಿ, ಅದರಲ್ಲಿ ಕೂಡ ಗಾಂಜಾ ಸೊಪ್ಪನ್ನು ತುಂಬಿದ್ದು ಕಂಡುಬಂದಿದ್ದು, ಅದನ್ನು ತೂಕದ ಯಂತ್ರದಿಂದ ತೂಕ ಮಾಡಲಾಗಿ ಸುಮಾರು 1 ಕೆಜಿ 950 ಗ್ರಾಮ್ ತೂಕ ಇರುತ್ತದೆ. ಅವುಗಳನ್ನು ಕ್ರಮಸಂಖ್ಯೆಗಾಗಿ 5 ರಿಂದ 7 ಎಂದು ನಮೂದಿಸಿ, ಸದರಿ ಪ್ಯಾಕೇಟುಗಳಿಂದ ತಲಾ 50 ಗ್ರಾಮ್ ಗಾಂಜಾವನ್ನು

ಎಫ್.ಎಸ್.ಎಲ್ ಪರೀಕ್ಷೆಗೆ ಕಳುಹಿಸಲು ಗಾಂಜಾವನ್ನು ಪ್ರತ್ಯೇಕವಾಗಿ ಪಂಚರ ಸಮಕ್ಷಮ ತೆಗೆದು, ಮಾದರಿಗಾಗಿ ಸಂಗ್ರಹಿಸಲಾಯಿತು. ಸದರಿ 3 ಪ್ಯಾಕೇಟುಗಳಿಂದ ತೆಗೆದ ಮಾದರಿ ಗಾಂಜಾಕ್ಕೆ ಹಾಗೂ ಉಳಿದ ಗಾಂಜಾದ ಮೇಲೆ ಪಂಚರು ಸಹಿ ಮಾಡಿದ ಚೀಟಿಗಳನ್ನು ಅಂಟಿಸಿ, "M" ಎಂಬ ಅಕ್ಷರದಿಂದ ಅರಗು ಸೀಲನ್ನು ಮಾಡಿ, ಅದಕ್ಕೆ ನಾನೂ ಕೂಡ ಸಹಿ ಮಾಡಿ ಮತ್ತೇ ಬಿಳಿ ಬಣ್ಣದ ಲೆದರ್ ಬ್ಯಾಗಿನಲ್ಲಿ ಹಾಕಿ ಸೀಲು ಮಾಡಿರುತ್ತೇನೆ. ಮಾದರಿಗೆ ವಶಪಡಿಸಿಕೊಂಡ ಗಾಂಜಾ ಪ್ಯಾಕೇಟುಗಳಿಗೆ ಕ್ರಮ ಸಂಖ್ಯೆ:5(ಎ), 6(ಎ) ಮತ್ತು 7(ಎ) ಎಂದು ನಮೂದಿಸಿರುತ್ತೇನೆ.

5). ನಂತರ ಕಪ್ಪು ಬಣ್ಣದ ಕಾಲೇಜ್ ಬ್ಯಾಗನ್ನು ತೆರೆದು ನೋಡಲಾಗಿ, ಅದರಲ್ಲಿ ಎರಡು ಪ್ಯಾಕೇಟುಗಳಿದ್ದು, ಅವುಗಳಲ್ಲಿ 1 ನೇ ಪ್ಯಾಕೇಟನ್ನು ತೆರೆದು ನೋಡಲಾಗಿ ಅದರಲ್ಲಿ ಒಂದು ಪೇಪರ್ ಬಂಡಲಿನ ಒಳಗೆ ಗಾಂಜಾ ಸೊಪ್ಪು ಇಟ್ಟು, ಪೇಪರಿನ ಮೇಲೆ ಇನ್ಸುಲೆನ್ ಟೇಪ್ ನಿಂದ ಸುತ್ತಿದ್ದು, ಅದನ್ನು ತೂಕದ ಯಂತ್ರದಿಂದ ತೂಕ ಮಾಡಲಾಗಿ ಅದು ಸುಮಾರು 2 ಕೆಜಿ ತೂಕ ಇರುತ್ತದೆ. ಮತ್ತೊಂದು ಪೇಪರ್ ಬಂಡಲ್ ಒಳಗೆ ಗಾಂಜಾವನ್ನು ಇಟ್ಟು, ಪೇಪರಿನ ಮೇಲೆ ಇನ್ಸುಲೆನ್ ಟೇಪ್ ನಿಂದ ಸುತ್ತಿದ್ದನ್ನು ತೆರೆದು ನೋಡಲಾಗಿ ಅದರಲ್ಲಿ ಗಾಂಜಾವಿದ್ದು, ಅದನ್ನು ತೂಕದ ಯಂತ್ರದಿಂದ ತೂಕ ಮಾಡಲಾಗಿ ಅದು ಸುಮಾರು 2 ಕೆಜಿ 50 ಗ್ರಾಮ್ ತೂಕ ಇರುತ್ತದೆ. ಅವುಗಳಿಗೆ ಕ್ರಮ ಸಂಖ್ಯೆ:8 ಮತ್ತು 9 ಎಂದು ನೀಡಲಾಯಿತು. ಸದರಿ ಎರಡೂ ಪ್ಯಾಕೇಟ್ ಗಳಿಂದ ತಲಾ 50 ಗ್ರಾಮ್ ಗಾಂಜಾವನ್ನು ಎಫ್.ಎಸ್.ಎಲ್ ಪರೀಕ್ಷೆಗಾಗಿ ಮಾದರಿಗಾಗಿ ತೆಗೆದು ಅವುಗಳಿಗೆ ಕ್ರಮ ಸಂಖ್ಯೆ:8(ಎ) ಹಾಗೂ 9(ಎ) ಎಂದು ನೀಡಿರುತ್ತೇನೆ. ನಂತರ ಸದರಿ ಮಾದರಿ ಗಾಂಜಾ ಹಾಗೂ ಉಳಿದ ಮೇಲ್ಕಂಡ ಗಾಂಜಾಗಳಿಗೆ ಪಂಚರು ಸಹಿ ಮಾಡಿದ ಚೀಟಿಯನ್ನು ಹಾಗೂ ನಾನು ಸಹಿ ಮಾಡಿದ ಚೀಟಿಯನ್ನು ಅಂಟಿಸಿ, "M" ಎಂಬ ಅಕ್ಷರದಿಂದ ಅರಗು ಸೀಲನ್ನು ಮಾಡಿ, ಅದನ್ನು ಮತ್ತೇ ಕಪ್ಪು ಬಣ್ಣದ ಬ್ಯಾಗಿನೊಳಗೆ ಇಟ್ಟಿರುತ್ತೇನೆ. ಸದರಿ ಕ್ರಮ ಸಂಖ್ಯೆ:1 ರಿಂದ 9 ನೇ ಬ್ಯಾಗುಗಳ ಒಟ್ಟು ತೂಕ 17 ಕೆಜಿ

750 ಗ್ರಾಮ್ ಇರುತ್ತದೆ. ಅದರ ಅಂದಾಜು ಮೌಲ್ಯ ಸುಮಾರು ರೂ.2.00 ಲಕ್ಷ ಆಗಬಹುದು ಎಂದು ಪಂಚರು ಅಭಿಪ್ರಾಯಪಟ್ಟಿರುತ್ತಾರೆ.

6). ನಂತರ ಮೇಲ್ಕಂಡ ಸದರಿ 4 ಜನ ಆರೋಪಿಗಳನ್ನು ಪ್ರತ್ಯೇಕವಾಗಿ ಅಂಗಶೋಧನೆ ಮಾಡಲಾಗಿ, ದ್ವಿಚಕ್ರ ವಾಹನ ನೋಂದಣಿ ಸಂಖ್ಯೆಃಎಪಿ–39–ಎಕೆ–9992 ವನ್ನು ಚಲಾಯಿಸಿಕೊಂಡು ಬಂದ 1 ನೇ ಆರೋಪಿ ನಾರಾಯಣ ತಂದೆ ನಾಗಪ್ಪರವರ ಬಳಿ ರೂ.1000/– ನಗದು ಹಣ ಹಾಗೂ ಒಂದು ಮೊಬೈಲ್ ಸಿಕ್ಕಿರುತ್ತದೆ. ನಂತರ ಆಟೋವಿನ ಚಾಲಕನಾದ 4 ನೇ ಆರೋಪಿ ಆಂಜನೇಯಲು ಬಳಿ ರೂ.200/– ನಗದು ಹಣ ಹಾಗೂ ಒಂದು ಮೊಬೈಲ್ ಸಿಕ್ಕಿರುತ್ತದೆ. ಆಟೋವಿನಲ್ಲಿ ಹಿಂದೆ ಕುಳಿತಿದ್ದ 2 ನೇ ಆರೋಪಿ ಪಿಂಡಿ ಅಪ್ಪಣನ ಬಳಿ ರೂ.1000/– ಹಣ ಹಾಗೂ ಒಂದು ಮೊಬೈಲ್ ಸಿಕ್ಕಿರುತ್ತದೆ. ಆಟೋವಿನಲ್ಲಿ ಹಿಂದೆ ಕುಳಿತಿದ್ದ 3 ನೇ ಆರೋಪಿ ಶ್ರೀಮತಿ ತುರೇರಾಮ್ ಕೋಂ ನಾಗೇಶ್ವರರಾವ್ ರವರು ಮಹಿಳೆಯಾದ್ದರಿಂದ ಸದರಿಯವರನ್ನು ಮಹಿಳಾ ಸಿಬ್ಬಂದಿಯಾದ ಪುಶ್ಪರವರ ಮುಖಾಂತರ ಅಂಗಶೋಧನೆ ಯನ್ನು ಮಾಡಿಸಲಾಗಿ, ಅವರ ಬಳಿ ಒಂದು ಮೊಬೈಲ್ ಮಾತ್ರ ಸಿಕ್ಕಿರುತ್ತದೆ. ಇವರು ಕೃತ್ಯಕ್ಕೆ ಬಳಸಿದ ಆಟೋ ನೋಂದಣಿ ಸಂಖ್ಯೆಃಎಪಿ–02–ಟಿಜಿ–0051 ಹಾಗೂ ದ್ವಿಚಕ್ರ ವಾಹನ ನೋಂದಣಿ ಸಂಖ್ಯೆಃಎಪಿ–39–ಎಕೆ–9992 ಆಗಿದ್ದು, ಇವುಗಳನೆಲ್ಲಾ ಪಂಚರ ಸಮಕ್ಷಮ ಮಧ್ಯಾಹ್ನ 3.00 ಗಂಟೆಯಿಂದ 5.00 ಗಂಟೆಯವರೆಗೆ ಘಟನಾ ಸ್ಥಳದಲ್ಲಿ ಮಹಜರ್ ಮಾಡಿ ಅಮಾನತ್ತುಪಡಿಸಿ ಕೊಂಡಿರುತ್ತೇನೆ. ಈಗ ಸಾಕ್ಷಿ ಸದರಿ ಗಾಂಜಾ ಸೊಪ್ಪು ಅಮಾನತ್ತು ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ–1 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–1(ಎ) ಎಂದು ಗುರುತಿಸಲಾಯಿತು. ಈಗ ಸಾಕ್ಷಿ ಕೃತ್ಯ ನಡೆದ ಸಮಯದಲ್ಲಿ ತೆಗೆದ 6 ಸಂಖ್ಯೆ ಫೋಟೋಗಳನ್ನು ನೋಡಿದ್ದು, ಅವುಗಳನ್ನು ತಕರಾರಿಗೆ ಒಳಪಡಿಸಿ ಒಟ್ಟಾಗಿ ನಿಪಿ–2 ಎಂದು ಗುರುತಿಸಲಾಯಿತು.

7). ನಂತರ ಅಮಾನತ್ತುಪಡಿಸಿಕೊಂಡ ಗಾಂಜಾ, ಎರಡು ವಾಹನಗಳು, 4 ಸಂಖ್ಯೆ ಮೊಬೈಲ್‌ಗಳು, ಆರೋಪಿಗಳ ಬಳಿ ವಶಪಡಿಸಿಕೊಂಡ ನಗದು ಹಣ ಹಾಗೂ 1 ರಿಂದ 4 ನೇ ಆರೋಪಿಗಳೊಂದಿಗೆ ದಾಳಿ ಪಂಚನಾಮೆಯೊಂದಿಗೆ ಚಿಕ್ಕಬಳ್ಳಾಪುರ ಗ್ರಾಮಾಂತರ ಪೊಲೀಸ್ ಠಾಣೆಗೆ ಹಿಂದಿರುಗಿ ಪಿಎಸ್‌ಐ ರವರ ಮುಂದೆ ನನ್ನ ವರದಿಯೊಂದಿಗೆ ಕಾನೂನು ರೀತ್ಯ ಕ್ರಮಕೈಗೊಳ್ಳಲು ಹಾಜರುಪಡಿಸಿರುತ್ತೇನೆ. ಈಗ ಸಾಕ್ಷಿ ಸದರಿ ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ–3 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–3(ಎ) ಎಂದು ಗುರುತಿಸಲಾಯಿತು. ನಾನು ಅಮಾನತ್ತುಪಡಿಸಿಕೊಂಡ ಮಾಲುಗಳು ಹಾಗೂ ಆರೋಪಿಗಳನ್ನು ನೋಡಿ ಗುರುತಿಸಬಲ್ಲೆ. ಈಗ ಸಾಕ್ಷಿ ನ್ಯಾಯಾಲಯದ ಮುಂದೆ ಇರುವ 1 ಮತ್ತು 4 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. 2 ಮತ್ತು 3 ನೇ ಆರೋಪಿಗಳು ತಲೆ ಮರೆಸಿಕೊಂಡಿದ್ದು, ಸಾಕ್ಷಿ ಸದರಿ ಆರೋಪಿಗಳನ್ನು ನೋಡಿದರೆ ಗುರುತಿಸುತ್ತೇನೆ ಎಂದು ನುಡಿಯುತ್ತಾರೆ.

**(ಈ ಹಂತದಲ್ಲಿ ನ್ಯಾಯಾಲಯದ ಮುಂದೆ ಮುದ್ದೆಮಾಲುಗಳು ಇಲ್ಲದ ಕಾರಣ ಸರ್ಕಾರಿ ಅಭಿಯೋಜಕರು ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿದ್ದು, ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು).**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.
Sd/-
**(ಎನ್.ವಿ. ಭವಾನಿ)**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ.